# ಎಸ್ ಜೆ ಎಂ ಸಂಸ್ಥೆಗಳ ವತಿಯಿಂದ ಗಣರಾಜ್ಯೋತ್ಸವ ಆಚರಣೆ

ಚಿತ್ರದುರ್ಗ ಜ. 26 : ಗಣರಾಜ್ಯದ ಪರಿಕಲ್ಪನೆ ಎಂದರೆ ಎಲ್ಲ ಪ್ರಾಂತ್ಯ, ಭಾಷೆ ಮೀರಿ ನಾವು ಭಾರತೀಯರು ಎಂಬ ಭಾವನೆ ನಮ್ಮೊಳಗೆ ಮೂಡಿಸುವಂಥದ್ದು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹ ನೆರವೇರಿಸಿ ಮಾತನಾಡಿದ ಶ್ರೀಗಳು, ಸ್ವಾತಂತ್ರ್ಯ ಭಾರತದಲ್ಲಿ ಗಣರಾಜ್ಯದ ಪರಿಕಲ್ಪನೆ ನೀಡಲಾಯಿತು. 12ನೇ ಶತಮಾನದಲ್ಲಿ ಕಲ್ಯಾಣರಾಜ್ಯದ ಪರಿಕಲ್ಪನೆಯನ್ನು ಕಾಣಬಹುದು. ಗಣಮೇಳ ಮತ್ತು ಗಣರಾಜ್ಯದ ನಡುವೆ ಅವಿನಾಭಾವ ಸಂಬಂಧವಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಲಾಯಿತು. ಹಾಗೆಯೇ ಸ್ವಾತಂತ್ರ್ಯ ಸಂದರ್ಭದಲ್ಲಿ ಒಂದುಗೂಡಿ ಬ್ರಿಟೀಷರಿಂದ ಬಿಡುಗಡೆ ಹೊಂದಲಾಯಿತು. ಗಣ ಅಂದರೆ ಸಮುದಾಯದ ಹೆಜ್ಜೆಗಳು. ಜಾತ್ಯತೀತವಾದ ಭಾವನೆ ಮುಖ್ಯ ಎಂದರು.

ಬಸವಣ್ಣನವರು ನಾವೆಲ್ಲರು ಮಾನವ ಕುಲಕ್ಕೆ ಸೇರಿದವರು ಎಂದು ಸಾರಿದರು. ವ್ಯಕ್ತಿಗಳಾಗುವುದಕ್ಕಿಂತ ಶಕ್ತಿಗಳಾಗಬೇಕು. ವಿದ್ಯಾಪೀಠದ ರೂವಾರಿಗಳಾದ ಮಲ್ಲಿಕಾರ್ಜುನ ಸ್ವಾಮಿಗಳು ಅನೇಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಪ್ರತಿಯೊಬ್ಬರಲ್ಲು ಸಂಘಟನಾ ಶಕ್ತಿ ಇರಬೇಕು. ಇದು ಸಮಾಜವನ್ನು ಬಲಪಡಿಸುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿ ಜಾತಿ ಮತ ಮರೆತು ನಾವು ಭಾರತೀಯರಾಗಿ ಸಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ನೌಕರರಿಗೆ ಶೇ. 5%ರಷ್ಟು ತುಟ್ಟಿಭತ್ಯೆಯನ್ನು ಜನವರಿ 1ರಿಂದ ಜಾರಿಗೆ ಬರುವಂತೆ ಪ್ರಕಟಿಸಿದರು. ನಂತರ ಪಿಹೆಚ್.ಡಿ. ಪದವಿ ಪಡೆದವರಿಗೆ, ರ್ಯಾಂಕ್ ಗಳಿಸಿದವರಿಗೆ, ಸೇವಾ ನಿವೃತ್ತಿ ಹೊಂದಿದ ನೌಕರರಿಗೆ, ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಶ್ರೀಗಳು ಸನ್ಮಾನಿಸಿದರು.

ಕಾರ್ಯಕ್ರಮದ ಪ್ರಾಯೋಜಕತ್ವವನ್ನು ಎಸ್.ಜೆ.ಎಂ. ಫಾರ್ಮಸಿ ಕಾಲೇಜಿನವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಎಸ್.ಜೆ.ಎಂ. ವಿಶ್ವವಿದ್ಯಾಲಯದ ಕುಲಪತಿ ಡಾ. ಮೋಹನ್‌ಕುಮಾರ್, ಕುಲಸಚಿವ ಡಾ. ಜಿತೇಂದರ್‌ಸಿಂಗ್ ಶೆಖಾವತ್, ಸಲಹೆಗಾರರಾದ ಡಾ. ಸಂಗಮೇಶ್, ವಿದ್ಯಾಧಿಕಾರಿ ಸಿದ್ದಪ್ಪ ಮೊದಲಾದವರಿದ್ದರು. ಎಸ್.ಜೆ.ಎಂ. ಸಂಸ್ಥೆಗಳ ಮುಖ್ಯಸ್ಥರುಗಳು, ಬೋಧಕ ಮತ್ತು ಬೋಧಕೇತರರು ಭಾಗವಹಿಸಿದ್ದರು. ವೈಷ್ಣವಿ ಸ್ವಾಗತಿಸಿದರು. ರಕ್ಷಿತ ನಿರೂಪಿಸಿದರು.






SJM VIDYAPEETHA INSTITUTIONS


SJM Vidyapeetha (R.)
INSTITUTIONS
CELEBRATE
Venue: Anubhava Mantapa

